# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1202 |
| ಸದಸ್ಯರ ಹೆಸರು | ಶ್ರೀ ರವಿಕುಮಾರ್ ಎನ್. (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 19.12.2024 |
| ಉತ್ತರಿಸಬೇಕಾದ ಸಚಿವರು | ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಲ್ಲಿ ಕಳೆದ 5 ವರ್ಷಗಳಲ್ಲಿ ಗಳಿಸಿದ 1281.65 ಕೋಟಿ ರೂ. ಬಡ್ಡಿಯ ಮೊತ್ತವನ್ನು ಸರ್ಕಾರದ ಲೆಕ್ಕಕ್ಕೆ ಜಮಾ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಡ್ಡಿ ಮೊತ್ತವನ್ನು ಸರ್ಕಾರಕ್ಕೆ ಜಮಾ ಮಾಡದೆ ಬಳಸಿದ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸ್ವಾಯತ್ತ ಸಂಸ್ಥೆಯಾಗಿ 2013 ರಲ್ಲಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿಯು (ಕೆಸ್ಟೆಪ್ಸ್) ಸ್ಥಾಪನೆಯಾಗಿದ್ದು, ಸದರಿ ಸಂಸ್ಥೆಯು ಕಳೆದ 5 ವರ್ಷಗಳಲ್ಲಿ ರೂ.46.19 ಕೋಟಿಗಳ ಬಡ್ಡಿ ಮೊತ್ತವನ್ನು ಗಳಿಸಿರುತ್ತದೆ.<br><br>ಕೆಸ್ಟೆಪ್ಸ್ ಸಂಸ್ಥೆಯು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ನೀತಿ ನಿರೂಪಣೆ ಮತ್ತು ಉಪಕ್ರಮಗಳ ರಚನೆ ಹಾಗೂ ಅನುಷ್ಠಾನದ ನೆರವಿನ ಒಂದು ವ್ಯವಸ್ಥೆಯಾಗಿ ಕಾರ್ಯನಿರ್ವಹಿಸಿ ರಾಜ್ಯಾದ್ಯಾಂತ ಇಲಾಖೆಯ ಕಾರ್ಯಕ್ರಮಗಳ ನಿಧಿಗಳ ಹಂಚಿಕೆಯ ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ರಾಜ್ಯಾದ್ಯಂತ ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಿ, ಅನುಮೋದನೆ ಪಡೆಯುವ ಉದ್ದೇಶದಿಂದ ಗಳಿಕೆಯಾಗಿರುವ ಬಡ್ಡಿ ಮೊತ್ತವನ್ನು ಸರ್ಕಾರಕ್ಕೆ ಜಮಾ ಮಾಡಿರುವುದಿಲ್ಲ.<br><br>ಸದರಿ ಬಡ್ಡಿ ಮೊತ್ತದ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸಿ, ಸರ್ಕಾರದ ಪೂರ್ವಾನುಮತಿ ಪಡೆದು ನಂತರ ಬಡ್ಡಿ ಮೊತ್ತವನ್ನು ಬಳಕೆ ಮಾಡಿಕೊಳ್ಳಲಾಗುತ್ತದೆ.<br><br>ಸರ್ಕಾರದ ಪೂರ್ವಾನುಮತಿ ಪಡೆಯದೇ ಯಾವುದೇ ಬಡ್ಡಿ ಮೊತ್ತವನ್ನು ಬಳಕೆ ಮಾಡಿಕೊಂಡಿರದ ಕಾರಣ ಸದರಿ ಬಡ್ಡಿ ಮೊತ್ತ ಬಳಸಿದ ಅಧಿಕಾರಿಗಳ ಮೇಲೆ ಯಾವುದೇ ಕ್ರಮ ಕೈಗೊಳ್ಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. |
| ಆ) | ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಲ್ಲಿ 1281.65 ಕೋಟಿ ರೂ. ಬಡ್ಡಿ ಮೊತ್ತವು ಯಾವ ಕಾರಣದಿಂದ ಸಂಗ್ರಹವಾಗಿದೆ; ಯಾವ ಆರ್ಥಿಕ ಸಂಸ್ಥೆಗಳಲ್ಲಿ ಸರ್ಕಾರದ ಮೊತ್ತವನ್ನು ಡೆಪಾಸಿಟ್ ಮಾಡಲಾಗಿದೆ; (ಡೆಪಾಸಿಟ್ ಮಾಡಲಾದ ಬ್ಯಾಂಕುಗಳ ಹೆಸರಿನೊಂದಿಗೆ ಮೊತ್ತದ ವಿವರ ನೀಡುವುದು) | ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕೆಸ್ಟೆಪ್ಸ್ ಸಂಸ್ಥೆಯು ಇಲಾಖೆಯ ಯೋಜನೆಗಳಾದ ವಿಜ್ಞಾನ ಕೇಂದ್ರ ಮತ್ತು ತಾರಾಲಯಗಳ ಸ್ಥಾಪನೆಗೆ ಹಂತ ಹಂತವಾಗಿ ಪ್ರಗತಿಗನುಗುಣವಾಗಿ ಅನುದಾನವನ್ನು ಬಿಡುಗಡೆ ಮಾಡುತ್ತಿರುವುದರಿಂದ, ಸದರಿ ಅನುದಾನವನ್ನು ಹಾಗೆ ಕೆಸ್ಟೆಪ್ಸ್ ಸಂಸ್ಥೆಯ ಉಳಿತಾಯ ಖಾತೆಯಲ್ಲಿಡುವ ಬದಲು ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: FD 38, TAR 2018, ದಿನಾಂಕ: 27.08.2018 ರನ್ವಯ ನಿಶ್ಚಿತ ಠೇವಣಿ ಮಾಡಿದ್ದು, ಕಳೆದ 5 ವರ್ಷಗಳಲ್ಲಿ ಒಟ್ಟು ರೂ.46.19 ಕೋಟಿಗಳ ಬಡ್ಡಿ ಮೊತ್ತವು ಸಂಗ್ರಹವಾಗಿರುತ್ತದೆ.<br><br>ಮುಂದುವರಿದು, ಕಳೆದ 5 ವರ್ಷಗಳಲ್ಲಿ ಗಳಿಸಲಾಗಿದ್ದ ಒಟ್ಟು ಬಡ್ಡಿ ಮೊತ್ತ ರೂ.46.19 ಕೋಟಿಗಳಲ್ಲಿ ಸರ್ಕಾರದ ಅನುಮೋದನೆ ಪಡೆದು ರೂ.28.99 ಕೋಟಿಗಳನ್ನು ವೆಚ್ಚ ಮಾಡಲಾಗುತ್ತಿದೆ. ಉಳಿಕೆ ಬಡ್ಡಿ ಮೊತ್ತ ರೂ.17.20 |

| | | |
|---|---|---|
| | | ಕೋಟಿಗಳನ್ನು ಆರ್ಥಿಕ ಇಲಾಖೆಯ ಮಾರ್ಗಸೂಚಿ, ಸುತ್ತೋಲೆ ಮತ್ತು ಕೆಟಿಪಿಪಿ ನಿಯಮಾನುಸಾರ e-procurement portal ನಲ್ಲಿ ಇ-ಬಿಡ್ಡಿಂಗ್, ಆಹ್ವಾನಿಸಿ ಸದರಿ ಬಿಡ್ಡಿಂಗ್ ನಲ್ಲಿ ಹೆಚ್ಚಿನ ಬಡ್ಡಿದರ ನೀಡಲು ಒಪ್ಪಿಗೆ ಸೂಚಿಸಲಾದ ರಾಷ್ಟ್ರೀಕೃತ ಬ್ಯಾಂಕ್ ಆದ, ಕೆನರಾ ಬ್ಯಾಂಕ್, ಇಂದಿರಾನಗರ ಶಾಖೆ, ಬೆಂಗಳೂರು ಇಲ್ಲಿ ಡೆಪಾಸಿಟ್ ಮಾಡಲಾಗಿದೆ. |
| ಇ) | ಸದರಿ ಮೊತ್ತವನ್ನು ಯಾರ ಆದೇಶದ ಮೇಲೆ ಡೆಪಾಸಿಟ್ ಮಾಡಲಾಗಿದೆ; ಸರ್ಕಾರದ ಹಣವನ್ನು ಬ್ಯಾಂಕುಗಳಲ್ಲಿ ಡೆಪಾಸಿಟ್ ಮಾಡಲು ಇರುವ ನಿಯಮಗಳೇನು? (ವಿವರ ನೀಡುವುದು) | ಕೆಟ್ಟಿಪ್ಸ್ ನಲ್ಲಿ ಸಂಗ್ರಹಗೊಂಡ ಬಡ್ಡಿಯ ಮೊತ್ತವನ್ನು ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: FD 38, TAR 2018, ದಿನಾಂಕ:27.08.2018ರ ನಿರ್ದೇಶನದ್ವಯ ಮತ್ತು ಕೆಟಿಪಿಪಿ ನಿಯಮಾನುಸಾರ ಡೆಪಾಸಿಟ್ ಮಾಡಲಾಗಿರುತ್ತದೆ.<br><br>**ಡೆಪಾಸಿಟ್ ಮಾಡಲು ಇರುವ ಪ್ರಮುಖ ನಿಯಮಗಳು ಕೆಳಗಿನಂತಿವೆ:**<br><br>1. ಡೆಪಾಸಿಟ್ ಮೊತ್ತ ರೂ.1.00 ಕೋಟಿ ಮೀರಿದ್ದಲ್ಲಿ e-procurement portal ನಲ್ಲಿ ಇ-ಬಿಡ್ಡಿಂಗ್ ಆಹ್ವಾನಿಸುವುದು ಕಡ್ಡಾಯವಾಗಿದೆ.<br>2. ಕಾಲಕಾಲಕ್ಕೆ RBI ನಿಗದಿಪಡಿಸುವ ಅಂಶಗಳನ್ನು ಆಧಾರವಾಗಿರಿಸಿ Capital Adequacy Ratio ಹಾಗೂ NPA ಗಳ ಪರಿಶೀಲಿಸುವುದು.<br>3. ಆರ್ಥಿಕ ಇಲಾಖೆಯ ಮಾರ್ಗಸೂಚಿ ಆದೇಶ ಸಂಖ್ಯೆ: FD 8 TAR 2020, ದಿನಾಂಕ:12.03.2021 ರನ್ವಯ ಒಂದು ಬ್ಯಾಂಕಿನಲ್ಲಿ 200.00 ಕೋಟಿಗಳು ಅಥವಾ ಬ್ಯಾಂಕಿನ 5% Net worth ಎರಡರಲ್ಲಿ ಯಾವುದು ಕಡಿಮೆಯೋ ಅಷ್ಟು ಮೊತ್ತವನ್ನು ಡೆಪಾಸಿಟ್ ಮಾಡಲು ಮಾತ್ರ ಅವಕಾಶವಿರುತ್ತದೆ.<br>4. ಬ್ಯಾಂಕಿನ Profit records and good wills verification and other rules and regulation of the Investee.<br><br>ಡೆಪಾಸಿಟ್ ಮತ್ತು ಠೇವಣಿಗಳನ್ನು ಇಡಲು ಸಂಬಂಧಿಸಿದಂತೆ ಕಾಲಕಾಲಕ್ಕೆ ಆರ್ಥಿಕ ಇಲಾಖೆಯು ಹೊರಡಿಸುವ ಮಾರ್ಗಸೂಚಿ ಮತ್ತು ಆದೇಶಗಳನ್ನು ಪಾಲಿಸುವುದು |

ಸಂಖ್ಯೆ: ಐಟಿಬಿಟಿ 281 ಎಸ್‌ಟಿಎಸ್ 2024

(ಎನ್.ಎಸ್. ಭೋಸರ್ರಾಜು)
ಮಾನ್ಯ ಸಣ್ಣ ನೀರಾವರಿ,
ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

ಎನ್.ಎಸ್. ಭೋಸರಾಜು
ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು